## ಸಂಸದೀಯ ವ್ಯವಹಾರಗಳ ಸಚಿವಾಲಯ

ಸಂಖ್ಯೆ: ಸಂವ್ಯಶಾಇ 299 ಅಶಾರ 2016, ಬೆಂಗಳೂರು, ದಿನಾಂಕ: 18.11.2016.

## ಅಧಿಸೂಚನೆ

ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ವೇತನ, ಭತ್ಯೆಗಳು ಮತ್ತು ಇನ್ನಿತರ ಏರ್ಪಾಡುಗಳ ಅಧಿನಿಯಮ, 1963ರ (1963ರ ಕರ್ನಾಟಕ ಅಧಿನಿಯಮ 15) 8ನೇ ಪ್ರಕರಣದೊಂದಿಗೆ ಓದಿಕೊಂಡಂತೆ 5ನೇ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸಕಾರವು ಈ ಮುಂದಿನ ನಿಯಮಗಳನ್ನು ರಚಿಸುತ್ತಿದೆ, ಎಂದರೆ:-

## ನಿಯಮಗಳು

**1. ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ (ಪ್ರಕಾರ್ಯಗಳು ಮತ್ತು ಕರ್ತವ್ಯಗಳು) ನಿಯಮಗಳು, 2016 ಎಂದು ಕರೆಯತಕ್ಕದ್ದು.

(2) ಇವು ಸರ್ಕಾರಿ ರಾಜ್ಯಪತ್ರದಲ್ಲಿ ಇವುಗಳನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** (1) ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) 'ಅಧಿನಿಯಮ' ಎಂದರೆ, ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ವೇತನ, ಭತ್ಯೆಗಳು ಮತ್ತು ಇನ್ನಿತರ ಏರ್ಪಾಡುಗಳ ಅಧಿನಿಯಮ, 1963ರ (1963ರ ಕರ್ನಾಟಕ ಅಧಿನಿಯಮ 15);

(ಬಿ) 'ಸಂಬಂಧಪಟ್ಟ ಸಚಿವರು' ಎಂದರೆ, ಮುಖ್ಯಮಂತ್ರಿ ಅಥವಾ ಯಾವ ಸಚಿವರಿಗೆ ಆತನು ಸಂಸದೀಯ ಕಾರ್ಯದರ್ಶಿಯಾಗಿರುವನೋ ಆ ಸಚಿವರು.

(2) ಈ ನಿಯಮಗಳಲ್ಲಿ ಬಳಸಿದ ಆದರೆ, ಪರಿಭಾಷಿಸದಿರುವ ಪದಗಳು ಮತ್ತು ಪದಾವಳಿಗಳು ಅಧಿನಿಯಮದಲ್ಲಿ ಅವುಗಳಿಗೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು.

**3. ಸಂಸದೀಯ ಕಾರ್ಯದರ್ಶಿಯ ಪ್ರಕಾರ್ಯಗಳು ಮತ್ತು ಕರ್ತವ್ಯಗಳು.-** ಮುಖ್ಯಮಂತ್ರಿ ಅಥವಾ ಆತನು ಸಂಸದೀಯ ಕಾರ್ಯದರ್ಶಿಯಾಗಿರುವ ಸಚಿವರು ಸಾಮಾನ್ಯವಾಗಿ ನಿರ್ದಿಷ್ಟಪಡಿಸಿರುವಂತೆ ಸಂಸದೀಯ ಕಾರ್ಯದರ್ಶಿಯ ಪ್ರಕಾರ್ಯಗಳು ಮತ್ತು ಕರ್ತವ್ಯಗಳು ಸಾಮಾನ್ಯವಾಗಿ ಇರತಕ್ಕದ್ದು ಮತ್ತು ಅವುಗಳಲ್ಲಿ ಈ ಮುಂದಿನವುಗಳು ಒಳಗೊಂಡಿರತಕ್ಕದ್ದು, ಎಂದರೆ:-

(1) ಆತನು ನೋಡಲ್ ವ್ಯಕ್ತಿಯಾಗಿದ್ದು ಮತ್ತು ಸಂಬಂಧಪಟ್ಟ ಸಚಿವನಿಗೆ ಶಾಸನಾತ್ಮಕ ಸಂಗತಿಗಳಲ್ಲಿ ನೆರವು ನೀಡತಕ್ಕದ್ದು.

(2) ಆತನು ಶಾಸನಾತ್ಮಕ ಸಂಗತಿಗಳನ್ನು ಒಳಗೊಂಡಿರುವ ವಿಷಯಗಳ ಕುರಿತು ಸಂಬಂಧಪಟ್ಟ ಸಚಿವನಿಗೆ ವಿವರಿಸತಕ್ಕದ್ದು ಮತ್ತು ಸದರಿ ಸಚಿವನ ನಿರ್ದೇಶನಗಳಂತೆ ಕಾರ್ಯನಿರ್ವಹಿಸತಕ್ಕದ್ದು.

(3) ಆತನು ಸದನದ ವ್ಯವಹಾರವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸದನದಲ್ಲಿ ಸಂಬಂಧಪಟ್ಟ ಸಚಿವನ ಶಾಸನಾತ್ಮಕ ಕರ್ತವ್ಯಗಳನ್ನು ಕಾರ್ಯಗತಗೊಳಿಸುವುದಕ್ಕೆ ನೆರವಾಗತಕ್ಕದ್ದು ಮತ್ತು ಸಲಹೆ ನೀಡತಕ್ಕದ್ದು.

(4) ಆತನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಕರ್ತವ್ಯಗಳನ್ನು ನಿರ್ವಹಿಸುವಾಗ ಸದನದ ಸಭಾನಾಯಕ, ಮುಖ್ಯ ಸಚೇತಕ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರೊಂದಿಗೆ ಸಂವಹನ ನಡೆಸುವಾಗ ಸಂಬಂಧಪಟ್ಟ ಸಚಿವನಿಗೆ ನೆರವಾಗತಕ್ಕದ್ದು.

(5) ಆತನು ಶಾಸನಾತ್ಮಕ ಸಂಗತಿಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಸಚಿವನು ಕಾಲಕಾಲಕ್ಕೆ ಪ್ರತ್ಯಾಯೋಜಿಸಿದ ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(6) ಆತನು ತನ್ನ ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ನಿರ್ವಹಿಸುವಾಗ ರಹಸ್ಯ ಮತ್ತು ಗೌಪ್ಯತೆಯನ್ನು ಕಾಪಾಡತಕ್ಕದ್ದು.

(7) ಮುಖ್ಯಮಂತ್ರಿ ಅಥವಾ ಯಾರಿಗೆ ಸಂಸದೀಯ ಕಾರ್ಯದರ್ಶಿಯಾಗಿರುವನೋ ಆಯಾ ಸಚಿವರು ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ.ದ್ವಾರಕನಾಥ್ ಬಾಬು**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳ ಇಲಾಖೆ

## PARLIAMENTARY AFFAIRS SECRETARIAT

## NO: DPAL 299 ASHARA 2016, BENGALURU DATED: 18.11.2016.

## NOTIFICATION

In exercise of the powers conferred by section 5 read with section 8 of the Karnataka Parliamentary Secretaries Allowances Act, 1963 (Karnataka Act 15 of 1963) the Government of Karnataka herby makes the following rules namely:-

**RULES**

**1. Title and commencement.-** (1) These rules may be called the Karnataka Parliamentary Secretaries (Functions and Duties) Rules, 2016.

(2) They shall come into force from the date of their publication in the Official Gazette.

**2. Definitions.-** (1) In these rules, unless the context otherwise requires,-

(a) 'Act' means the Karnataka Parliamentary Secretaries Allowances Act, 1963 (Karnataka Act 15 of 1963);

(b) 'Concerned Minister' means the Chief Minister or a Minister to whom he is the Parliamentary Secretary;

(2) The words and expressions used in these rules but not defined shall have the same meaning assigned to them in the Act.

**3. Functions and Duties of Parliamentary Secretary.-** The functions and duties of Parliamentary Secretary shall ordinarily be that as specified by the Chief Minister or a Minister to whom he is a Parliamentary Secretary which may be as follows, namely:-

(1) He shall be nodal person and also to assist in the legislative matters to the concerned minister.

(2) He shall brief the concerned minister the subjects which involves legislative matters and to act as per directions of the said Minister.

(3) He shall assist and advice to execute legislative duties of the concerned Minister on the floor of the House. So that the Business of the House could be effectively function.

(3) He shall assist the concerned Minister to co-ordinate with Leader of the House, Chief Whip and Law and Parliamentary Affairs Minister while executing the duties of both the Houses of the State Legislature.

(4) He shall execute functions and duties delegated by the concerned Minister in respect of legislative matters from time to time.

(5) He shall maintain secrecy and confidentiality during the execution of his functions and duties.

(6) Such other duties as may be specified by the Chief Minister or the Minister to whom he is a Parliamentary Secretary.

By order and in the name of the Governor of Karnataka

(**K. Dwarakanath Babu**) Secretary
to Government Department of
Parliamentary Affairs.